# ಯಾವುದು ಪೇಂಟಿಂಗ್? ಯಾವುದು ಫೋಟೊ?





ಫೋಟೊ ಯಾವುದು? ಕಲಾಕೃತಿ ಯಾವುದು? ನೋಡುಗರನ್ನು ಗೊಂದಲಕ್ಕೆ ತಳ್ಳಿ ರೋಮಾಂಚನ ಉಂಟುಮಾಡುವುದು 'ಹೈಪರ್ ರಿಯಲಿಸಂ' ಕಲೆಯ ಮೂಲ ಉದ್ದೇಶ. ಈ ಕಲೆಯಲ್ಲಿ ಜಪಾನ್‌ನ ಯಾಸ್ ಸಾಕಷ್ಟು ಪಳಗಿದ ಚಿತ್ರಕಾರ.

■ ವಿನಯ್‌ಕುಮಾರ್ ಬಿ.ಹೆಚ್.

ಇತ್ತೀಚೆಗೆ ಜಪಾನ್‌ನ ಕಲಾವಿದನೊಬ್ಬ ಹಸಿ ಮೊಟ್ಟೆಯ ಫೋಟೊ ಹಾಗೂ ತಾನು ಪೇಂಟ್ ಮಾಡಿರುವ ಮೊಟ್ಟೆಯ ಕಲಾಕೃತಿಯನ್ನು ಅಕ್ಕಪಕ್ಕದಲ್ಲಿರಿಸಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ. ಇವುಗಳಲ್ಲಿ ಮೊಟ್ಟೆಯ ಫೋಟೊ ಯಾವುದು? ಪೇಂಟಿಂಗ್ ಯಾವುದು? ಎನ್ನುವುದನ್ನು ಪತ್ತೆಹಚ್ಚುವಂತೆ ಕಲಾವಿದ ಸವಾಲು ಒಡ್ಡಿದ. ಬಹಳಷ್ಟು ಜನರಿಗೆ ಮೊಟ್ಟೆಯ ಫೋಟೊ ಯಾವುದು, ಕಲಾಕೃತಿ ಯಾವುದೆನ್ನುವುದನ್ನು ಸುಲಭಕ್ಕೆ ಪತ್ತೆ ಹಚ್ಚಲಾಗಲಿಲ್ಲ.

ಫೋಟೊಗಳ ತಲೆಯ ಮೇಲೆ ಮೊಟಕಿದಷ್ಟು ಸಹಜವಾಗಿ ಚಿತ್ರಗಳನ್ನು ಬಿಡಿಸುವ ಈ ವಿಶಿಷ್ಟ ಕಲಾವಿದನ ಹೆಸರು ಯಾಸ್. ಜಪಾನ್‌ನ ಕಲಾಭಿಮಾನಿಗಳ ನಡುವೆ ಯಾಸ್ 'ಹೈಪರ್ ರಿಯಲಿಸಂ ಪೇಂಟಿಂಗ್'ನಿಂದಾಗಿ ಜನಪ್ರಿಯ. ತಾನು ಚಿತ್ರಿಸುವ ವಸ್ತುವಿನ ಪ್ರತಿಯೊಂದು ಸಣ್ಣಪುಟ್ಟ ಸೂಕ್ಷ್ಮವನ್ನೂ ಬಿಡದೆ ತನ್ನ ರಚನೆಯಲ್ಲಿ ಬಿಂಬಿಸುತ್ತಾನೆ.